**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಟಿ.ನರಸೀಪುರ</u>**

<u>ದಿನಾಂಕ 02 ನೇ ಜೂನ್ 2026</u>

**<u>ಸಿ.ಸಿ. 997/2026</u>**

ಪಿರ್ಯಾದುದಾರರುಃ ರಾಜ್ಯದ ಪರ ಬನ್ನೂರು ಪೊಲೀಸರು

ವಿರುದ್ಧ

ಆರೋಪಿಃ ವರುಣ್.ಎಸ್,
ಬಿನ್ ಪುಟ್ಟಸ್ವಾಮಿ, ಸುಮಾರು 21 ವರ್ಷ,
ವಾಸಃ #2/1, 10 ನೇ ಕ್ರಾಸ್, ಸಂಜೀವಿನಿ ನಗರ,
ಮೂಡಲಪಾಳ್ಯ ನಾಗರಬಾವಿ,
ಬೆಂಗಳೂರು ಸಿಟಿ.

**<u>ಆರೋಪಣೆ</u>**

**ಶ್ರೀ. ಸಚಿನ್ ಹೆಚ್.ಆರ್, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಟಿ.ನರಸೀಪುರ, ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಕೆಳಕಂಡಂತೆ ಆರೋಪಣೆಯನ್ನು ಮಾಡುತ್ತೇನೆ.**

ದಿನಾಂಕ 09.02.2026 ರಂದು ಬೆಳಿಗ್ಗೆ 06.00 ಗಂಟೆ ಸಮಯದಲ್ಲಿ ಬನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯ ಬನ್ನೂರು-ಮಂಡ್ಯ ಮುಖ್ಯ ರಸ್ತೆ ತುರುಗನೂರು ಗ್ರಾಮ ಶಿವಣ್ಣ ರವರ ಕೋಳಿ ಫಾರಂ ಹತ್ತಿರ ಚಾಸಾ-1 ರವರು ತಮ್ಮ ಬಾಬ್ತು ಕೆ.ಎ-25-ಪಿ-6115 ನಂಬರಿನ ಕಾರಿನಲ್ಲಿ ತುರುಗನೂರು ಗ್ರಾಮದಿಂದ ಬೀಡನಹಳಿಳ ಗ್ರಾಮಕ್ಕೆ ವಾಪಸ್ಸು ಬರುತ್ತಿದ್ದಾಗ ಆರೋಪಿಯಾದ ನೀವು ನಿಮ್ಮ ಕೆ.ಎ-05-ಎಂ.ಎಸ್-3523 ನಂಬರಿನ ಕಾರನ್ನು ಬನ್ನೂರು ಕಡೆಯಿಂದ ಮಂಡ್ಯದ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ-1 ರವರ ಕಾರಿಗೆ ಡಿಕ್ಕಿ ಪಡಿಸಿದ್ದು, ಸದರಿ ಅಪಘಾತಕ್ಕೆ ಕಾರಣರಾಗಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.**281** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಅದೇ ರೀತಿ ಮೇಲೆ ಹೇಳಿರುವ ದಿನಾಂಕ, ಸಮಯ ಮತ್ತು ಸ್ಥಳದಂದು ಆರೋಪಿತರಾದ ನೀವು ನಿಮ್ಮ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ

ಮಾಡಿಕೊಂಡು ಬಂದು ಚಾಸಾ−1 ರವರ ಕಾರಿಗೆ ಡಿಕ್ಕಿ ಪಡಿಸಿದ ಪರಿಣಾಮ ಚಾಸಾ−1 ರವರಿಗೆ ತಲೆಗೆ ಮತ್ತು ಕತ್ತಿನ ಹತ್ತಿರ ಸಾಧಾರಣ ಸ್ವರೂಪದ ಗಾಯವಾಗಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.**125(a)** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

**(ಮೇಲ್ಕಂಡ ಆರೋಪಗಳ ಬಗ್ಗೆ ಆರೋಪಿಯಾದ ನೀವು ಈ ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದ್ದು ಎಂದು ನಾನು ನಿರ್ದೇಶಿಸುತ್ತೇನೆ.)**

-Sd/-
**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಟಿ.ನರಸೀಪುರ.**

**ಆರೋಪಿಯ ಹೇಳಿಕೆ**

ಪ್ರಶ್ನೆ-1 ಈಗ ಓದಿ ಹೇಳಿದ ಆರೋಪಣೆಯನ್ನು ಅರ್ಥ ಮಾಡಿಕೊಂಡಿರಾ ?

ಉತ್ತರಃ

ಪ್ರಶ್ನೆ-2 ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆ ಆಗಬೇಕೆನ್ನುವಿರಾ?
ಉತ್ತರಃ

**(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದು ಕೊಂಡಿದ್ದು ಅವು ಸರಿಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)**

-Sd/-

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ ,ಟಿ.ನರಸೀಪುರ.**

**ಆರೋಪಿ ಸಹಿಃ**